ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 2nd April 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Rural Communication Roads in S. K. District

91. Sri S. JAYAPRAKASH SHETTY (Brahmavar).—

Will the Minister for Public Works be pleased to state :—

(*a*) the amount earmarked by the State Government towards rural communication roads ;

(*b*) the amount provided towards the same for various districts ;

(*c*) the amount spent towards the same during the last ten years in South Kanara District ;

(*d*) the amount earmarked during this year ?

Sri K. LAKKAPPA (Minister for Public Works).—

(*a*) Rs. 54.00 lakhs.

(*b*) *Vide* statement appended.

(*c*) Rs. 75.69 lakhs.

(*d*) Rs. 3.11 lakhs.

(SRI K. LAKKAPPA)

STATEMENT

Sl. No.	Name of District			Original allotment (Rs. in lakhs)
1	Bangalore	...	...	1.51
2	Mysore	...	...	1.71
3	Mandya	...	...	1.40
4	Tumkur	...	...	1.46
5	Kolar	...	...	2.31
6	Belgaum	...	...	3.61
7	Bijapur	...	...	2.80
8	Shimoga	...	...	1.00
9	Chitradurga	...	...	1.87
10	Chickmagalur	...	...	3.40
11	Hassan	...	...	1.27
12	Gulbarga	...	...	3.10
13	Raichur	...	...	3.75
14	Bidar	...	...	.75
15	Bellary	...	...	.85
16	Dharwar	...	...	5.95
17	North Kanara District	...	...	4.75
18	South Kanara District	...	...	3.11
19	Coorg	...	...	.95
	Reserve	...	...	8.45
			Total ...	54.00

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಸ್ವಾಮಿ, ಈ ಒಂದು ಪ್ರಾಮುಖ್ಯವಾದ ಕೆಲಸಕ್ಕೆ ಈ ವರ್ಷಕ್ಕೆ 3.11 ಲಕ್ಷ ರೂಪಾಯಿಯಷ್ಟು ಹಣವನ್ನು ಇಟ್ಟಿದ್ದೀರಿ. ಅದು ಬಹಳ ಕಡಿಮೆ. ಅನೇಕ ಕಡೆಗಳಲ್ಲಿ ದೊಡ್ಡ ದೊಡ್ಡ ನದಿಗಳಿಗೆ, ಬ್ರಿಡ್ಜಸ್ ಕಟ್ಟಲು ಹಣ ಒದಗಿಸಿದ್ದೀರಿ. ಅದನ್ನೂ ಮಾಡಿ ವರಿಸಿ; ಮತ್ತು ಸಣ್ಣ ಸಣ್ಣ ಹಳ್ಳಗಳಿಗೆ ಕಡಮೆ ವೆಚ್ಚವಾಗುವುದರಿಂದ 8-10 ವರ್ಷಗಳಿಂದಲೂ ಬಾಕಿ ಉಳಿದಿರುವ ಕೆಲಸವನ್ನು ಸಂಪೂರ್ಣ ಮಾಡಲಕ್ಕೆ ಮನಸ್ಸು ಮಾಡುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ತಾವು ಹೇಳಿದ ಹಾಗೆ ಹಣ ಕಡಿಮೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸರ್ಕಾರಕ್ಕೆ ಇರತಕ್ಕಂಥ ಹಣದ ಮಿತಿಯಲ್ಲಿ ಪ್ರತಿಯೊಂದು ಜಿಲ್ಲೆಗೂ ಹಂಚಿಕೆ ಮಾಡುತ್ತೇವೆ. ಆಗ ಅದಕ್ಕಿಂತ ಜಾಸ್ತಿ ಮಾಡುವುದಕ್ಕೆ ಅವಕಾಶವಿಲ್ಲದೇ ಇರುವ ಕಾರಣ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಹಣದ ಅವಶ್ಯಕತೆ ನೋಡಿಕೊಂಡು ಹೆಚ್ಚು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ತಾವು ಲಕ್ಷಗಟ್ಟಲೆ ರೂಪಾಯಿಗಳನ್ನು ದೊಡ್ಡ ದೊಡ್ಡ ಬ್ರಿಡ್ಜಸ್‌ಗೆ ಖರ್ಚು ಮಾಡುತ್ತೀರಿ. 8-10 ವರ್ಷದಿಂದಲೂ ಉಳಿದಿರುವ ರಸ್ತೆಗಳ ಕೆಲಸವನ್ನು ಸಂಪೂರ್ಣ ಮಾಡಲಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಉಳಿದಿರುವ ಕೆಲಸವನ್ನು ಕೆಂಪ್ಲೀಟ್ ಮಾಡಬೇಕು ಅನ್ನುವುದು ಸರ್ಕಾರದ ಉದ್ದೇಶ. ಆದರೆ ಹಣದ ಅವಶ್ಯಕತೆಯನ್ನು ನೋಡಿಕೊಂಡು ಕೆಲಸ ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಹಳ್ಳಗಳು, ಬೆಟ್ಟ ಮತ್ತು ತೋಡುಗಳು, ಚಿಕ್ಕ ಚಿಕ್ಕ ನದಿಗಳು ಇಲ್ಲರುವುದರಿಂದ ಅನೇಕ ನದಿಗಳಿಗೆ ಸಂಪರ್ಕವನ್ನು ಒದಗಿಸ ಬೇಕಾಗಿದೆ. ಏಕೆಂದರೆ ಅಲ್ಲಿಯ ಗ್ರಾಮಾಂತರದ ಜನರು ಸಾಮಗ್ರಿಗಳನ್ನು ತರಬೇಕಾದರೆ ಸಾಗಿಸಲು ಬಹಳ ಕಷ್ಟವಾಗಿರುವುದರಿಂದ ಅಲ್ಲಿಗೆ ಸಣ್ಣ ಸಣ್ಣ ನದಿಗಳಿಗೆ ಚಿಕ್ಕ ಚಿಕ್ಕ ಸೇತುವೆಗಳ ಅವಶ್ಯಕತೆ ಇರುವುದರಿಂದ ಈ ವರ್ಷವೇ ಅವನ್ನು ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ದಕ್ಷಿಣ ಕನ್ನಡ ಜಿಲ್ಲೆಗೆ ಒಂದಕ್ಕೇ ಪ್ರಾಧಾನ್ಯತೆ ಕೊಡುವುದಕ್ಕಾಗುವು ದಿಲ್ಲ. ಎಲ್ಲಾ ಜಿಲ್ಲೆಗಳ ಪರಿಸ್ಥಿತಿಯ ಕಡೆಗೂ ಗಮನ ಹರಿಸಬೇಕಾಗಿದೆ. ಸಾಧ್ಯವಾದಮಟ್ಟಿಗೆ ಹೆಚ್ಚಿಗೆ ತೆಗೆದುಕೊಂಡು ಮಾಡಬೇಕು ಎನ್ನುವುದೂ ಕೂಡ ಸರ್ಕಾರದ ಉದ್ದೇಶವಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ದಕ್ಷಿಣ ಕನ್ನಡ ಜಿಲ್ಲೆ ಯನ್ನು ಒಂದನ್ನೇ ನೋಡುವುದಕ್ಕಾಗುವುದಿಲ್ಲ, ಎಲ್ಲಾ ಕಡೆಯೂ ಇರುವ ಪರಿಸ್ಥಿತಿಯನ್ನು ನೋಡ ಬೇಕು ಎಂದು ಹೇಳಿದರು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆಗಳು ಬಹಳ ಕಡಿಮೆ. ಮತ್ತು ಈವಾಗ ದಕ್ಷಿಣ ಕನ್ನಡ ಜಿಲ್ಲೆಗೆ ಬಂದರು ಯೋಜನೆ, ಫರ್ಟಿಲೈಸರ್ಸ್ ಫ್ಯಾಕ್ಟರಿ ಮುಂತಾದ ಯೋಜನೆ ಗಳು ಬರುತ್ತವೆ ಎಂದು ಹೇಳುತ್ತೀರಿ. ಆದುದರಿಂದ ಈ ಯೋಜನೆಗಳು ಕಾರ್ಯಗತವಾಗ ಬೇಕಾದರೆ ರಸ್ತೆಗಳು ಅಗತ್ಯವಾಗಿರುವುದರಿಂದ ಹೆಚ್ಚು ಹಣವನ್ನು ಒದಗಿಸಿ ರಸ್ತೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅಗತ್ಯತೆ ಇದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅದಕ್ಕೆ ಹಣವನ್ನು ಒದಗಿಸಿರತಕ್ಕುದು ಕಡಿಮೆ ಎನ್ನುವ ಮಾತನ್ನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಜಿಲ್ಲೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಒದಗಿಸಿದ್ದೇವೆ. ಅಲ್ಲಿನ ಪರಿಸ್ಥಿತಿಯ ಆಧಾರದ ಮೇಲೆ ಹೆಚ್ಚಿನ ಹಣವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿದ್ದೇವೆ.

Sri R. NAGAN GOUDA.—I notice that Bellary has been given an allotment which is almost half of the allotment given to some Districts. May I know if any principle has been followed in making allotment for the various Districts ?

Sri K. LAKKAPPA.—It is not possible to follow hard and fast rules. Some Districts need more roads than other Districts and therefore we have to allot more funds to those Districts. Some Districts need no more roads. Looking into the needs of the District, we are allotting funds. We cannot have a definite policy in this regard.

ಶ್ರೀ ಸಿದ್ದಯ್ಯ ಕಾಶೀಮಠ.—ಗ್ರಾಮಾಂತರ ಸಂಪರ್ಕ ರಸ್ತೆಗಳನ್ನೆಲ್ಲ ತಾಲ್ಲೂಕು ಬೋರ್ಡ್ ಗಳಿಗೆ ವಹಿಸಿ ಅದರ ಮುಖಾಂತರ ಅವುಗಳನ್ನು ನುವ್ಯವಸ್ಥೆಯಲ್ಲ ಇಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಗಳನ್ನು ತಾಲ್ಲೂಕು ಬೋರ್ಡಿಗೆ ಕೊಡಬೇಕು ಎಂದು ಹಿಂದೆಯೇ ಸರ್ಕಾರ ನಿರ್ಧಾರವನ್ನು ತೆಗೆದುಕೊಂಡಿದೆ. ಆ ಪ್ರಕಾರವಾಗಿ ಈಗಾಗಲೇ ಅನೇಕ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಇಂಥ ರಸ್ತೆಗಳನ್ನು ತೆಗೆದುಕೊಂಡಿವೆ. ಇನ್ನೂ ಕೆಲವು ತಾಲ್ಲೂಕು ಬೋರ್ಡ್‌ಗಳು ಅವರಲ್ಲಿರತಕ್ಕ ಹಣಕಾಸಿನ ಕೊರತೆಯಿಂದ ತೆಗೆದುಕೊಂಡಿಲ್ಲ. ಈಗ ಅವರಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ, ಇವುಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಡಬೇಕು ಎನ್ನುವ ಯೋಚನೆಯಲ್ಲಿ ಸರ್ಕಾರ ಇದೆ.

ಶ್ರೀ ಎ. ರಾಮಚಂದ್ರ,—ದಕ್ಷಿಣ ಕನ್ನಡ ಜಿಲ್ಲೆಗಿಂತ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಜಾಸ್ತಿ ಹಣವನ್ನು ಒದಗಿಸಿದ್ದೀರಿ. ಮಾನ್ಯ ಸದಸ್ಯರಾದ ಭಾಸ್ಕರ ಶೆಟ್ಟರು ಹೇಳಿದ ಹಾಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದರು ನಿರ್ಮಾಣವಾಗುತ್ತಿದ್ದು ಅಲ್ಲಿ ದೊಡ್ಡ ಪಟ್ಟಣ ಆಗುತ್ತದೆ. ಅಲ್ಲಲ್ಲಿ ಎಷ್ಟೋ ರಸ್ತೆಗಳಿವೆ, ಹಳ್ಳಗಳಿವೆ. ಇವೆಲ್ಲ ನಾದುರಸ್ತಿಯಾಗಿದ್ದು ಅಲ್ಲಿ ಹೆಚ್ಚಿನ ಹಣದ ಅವಶ್ಯಕತೆ ಇದೆ. ಆದರೂ ಕೂಡ ಇಷ್ಟು ಕಡಮೆ ಹಣವನ್ನು ಆ ಜಿಲ್ಲೆಗೆ ಒದಗಿಸುವುದಕ್ಕೆ ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ನಾನು ಮೊದಲೇ ಉತ್ತರ ಹೇಳಿದ್ದೇನೆ. ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ದಕ್ಷಿಣ ಕನ್ನಡ ಜಿಲ್ಲೆಗೆ ಕಡಮೆ ಹಣ ಒದಗಿಸಿಲ್ಲ. ಇನ್ನೂ ಮಾಡಬೇಕಾದ ಕೆಲಸಗಳು ಬಹಳ ಇವೆ ಎಂದು ತಿಳಿದುಕೊಂಡಿದ್ದೇನೆ. ಹಣವಿಲ್ಲದೆ ನಾವು ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಹಾನನ ಜಿಲ್ಲೆಗೆ ಕೊಟ್ಟಿರತಕ್ಕುದು 1.27 ಲಕ್ಷ ರೂಪಾಯಿ. ಇದು ಬಹಳ ಕಡಮೆ. ಸರ್ಕಾರದವರು ಪುನರ್ವಿಮರ್ಶೆ ಮಾಡಿ ಜಾಸ್ತಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ, ಸ್ವಾಮಿ ?

ಶ್ರೀ ಕೆ. ಲಕ್ಕಪ್ಪ.—ನಾನು ಮೊದಲೇ ಹೇಳಿದ ಹಾಗೆ ಎಲ್ಲ ಜಿಲ್ಲೆಗಳಿಗೂ ಒಂದೇ ಸಮನಾಗಿ ಹಂಚುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲ ಎಷ್ಟು ಮೈಲಿ ರಸ್ತೆ ಇದೆ, ಎಷ್ಟು ಮೈಲಿ ರಸ್ತೆಯ ಅವಶ್ಯಕತೆ ಇದೆ ಎನ್ನುವುದನ್ನೆಲ್ಲ ನೋಡಿ ಕೊಡಬೇಕಾಗುತ್ತದೆ, ಆ ರೀತಿ ಕೊಡುತ್ತೇವೆ.

Misappropriation of Panambur Service Co-operative Credit Society Funds

576. Sri RATNAKUMAR KATTEMAR (Moodabidri).—

Will the Minister for Development be pleased to state :—

(*a*) whether Government has received a complaint from the President of the Panambur Service Co-operative Credit Socity, Panambur, South Kanara, alleging misappropriation of society funds to the tune of over Rs. 18,000 ;

(*b*) whether complaint on the alleged misappropriation of funds of the said society has been lodged with the Inspector of Police, Mangalore Rural Circle in the above matter ;

(*c*) whether the person against whom the complaints have been lodged is a member of the D.C.C., South Kanara ;

(*d*) whether the audit of accounts of the society and enquiry under section 64 are complete ;

(*e*) the total amount of society funds misappropriated ;

(*f*) whether the persons complained against have been arrested and the books of the society have been seized ?

Sri B. L. GOWDA (Deputy Minister for Co-operation).—

(*a*) Yes.

(*b*) Yes ; by the President of the Society.

(*c*) No information.

(*d*) The audit of the accounts of 1967-68 is completed but not the enquiry under section 64.

(*e*) Rs. 18,000 as alleged by the President.

(*f*) No.

ಶ್ರೀ ಕೆ. ರತ್ನಕುಮಾರ ಶೆಟ್ಟಿ.—ಅಪಾದನೆ ಮಾಡಿರುವ ವ್ಯಕ್ತಿಯ ಹೆಸರು ಹೇಳಬಹುದೋ ?

† ಶ್ರೀ ಬಿ. ಎಲ್. ಗೌಡ.—ಶ್ರೀನಿವಾಸ ರಾವ್ ಎಂದು ಅವರ ಹೆಸರು.

†Indicates that remarks or speeches have not been revised by the member concerned†